ದುಖಿ ನರಳುತ್ತಾ ಅವರೆಡೆಗೆ ಕಣ್ಣು ಬಿಟ್ಟು ಚೇತರಿಸಿಕೊಂಡ.

''ಮುಷ್ಟಿಯಷ್ಟು ಹೊಟ್ಟು ಸಾಗಿಸಲಿಕ್ಕೆ ಸಾಯಂಕಾಲವೇ ಮಾಡಿದೆಯಲ್ಲೋ... ಅದರಲ್ಲಿ ನಿದ್ರೆ ಬೇರೆ!... ಏಳು, ಕೊಡಲಿ ಹಿಡಿ. ಕಟ್ಟಿಗೆ ಒಡೆದು ಹಾಕು. ಇಷ್ಟು ಸಣ್ಣ ಕೆಲಸ ಮಾಡಲಿಕ್ಕೂ ಆಗಲ್ವ ನಿನಗೆ?... ಪೂಜೆಗೆ ತಡವಾದರೆ ನನಗೆ ದೋಷ ಕಟ್ಟಬೇಡ. ಬೇಗ ಮುಗಿಸು. ಅದಕ್ಕೇ ಹೇಳೋದು, ಕೀಳು ಜಾತಿಯವರ ಮನೆಯಲ್ಲಿ ಊಟ ಮಾಡೋದಂದ್ರೆ ದೃಷ್ಟಿ ತಾಗಿದಂತೆಯೇ!?...''

ದುಖಿ ಮತ್ತೆ ಕೊಡಲಿ ಕೈಗೆ ಎತ್ತಿಕೊಂಡ. ಹೇಳಬೇಕೆಂದು ಯೋಚಿಸಿಕೊಂಡಿರುವ ಮಾತುಗಳನ್ನೇ ಮರೆತು ಬಿಟ್ಟ. ಖಾಲಿ ಹೊಟ್ಟೆಯಲ್ಲಿ ಬುದ್ಧಿ ಕೆಲಸಕ್ಕೆ ಬಾರದಂತಾಯಿತು. ಮುಖ ಮಾರ್ಜನಕ್ಕೂ ಅವಕಾಶವಾಗದೆ ಬೆಳಗ್ಗೆಯಿಂದ ನೀರು ಕುಡಿಯದೇ ಅವಸರವಾಗಿ ಹೊರಟು ಬಂದಿದ್ದ. ಕೈಕಾಲು ಆಡಿಸುವುದೇ ದುಸ್ತರವಾಯಿತು. ಪಂಡಿತರು ಬಂದು ವಿಧಿ ಕಾರ್ಯ ಮಾಡದಿದ್ದರೆ ಸತ್ಯ ನಾಶವಾಗುವುದೆಂದು ಮತ್ತು ತಮ್ಮವರ ನಡುವೆ ಇರುವ ಮರ್ಯಾದೆಯೂ ಇಲ್ಲವಾಗುವುದೆಂದು ದುಖಿ ಯೋಚಿಸಿ ಮನಸ್ಸಿಗೆ ಸಮಾಧಾನ ಮಾಡಿಕೊಂಡ. ಪಂಡಿತರು ಅವನನ್ನು ಉತ್ತೇಜಿಸಲು ಮುಂದಾದರು.

''ಹೊಡಿ, ಬಿಡಬೇಡ... ಧಮ್ಮಿಲ್ಲವಾ?... ಗಂಟು ಬಿಡಿಸಿ ತೋರಿಸು... ಜೋರಾಗಿ ಹೊಡಿ... ಇನ್ನೂ ಜೋರಾಗಿ, ನೀನೆಂಥ ಗಂಡಸೋ... ಬಿಡಬೇಡ... ಸುಮ್ನೆ ನಿಂತುಕೋ ಬೇಡ, ಹೊಡಿ... ಇವತ್ತು ಇತ್ಯರ್ಥವಾಗಲಿ. ಬಿಡಬೇಡ...''

ತಾನು ನಿಶ್ಯಕ್ತನೇ?... ಶಕ್ತಿಗೆ ಅವಮಾನವೇ?... ಆ ಗಂಟನ್ನು ಒಡೆದು ಹಾಕಲು ದುಖಿ ಆಕ್ರೋಶಭರಿತನಾದ. ತಾನೇನು ಎಂದು ಇವರಿಗೆ ತೋರಿಸಿಬಿಡಬೇಕು ಎನ್ನುವ ರೀತಿ ಪ್ರಜ್ಞೆಯನ್ನೇ ಕಳೆದುಕೊಂಡವನಂತೆ ಆವೇಶದಲ್ಲಿ ಕೊರಡಿನ ಗಂಟಿಗೆ ಕೊಡಲಿಯಿಂದ ಜೋರಾಗಿ ಹೊಡೆಯತೊಡಗಿದ. ಯಾವ ಗುಪ್ತಶಕ್ತಿ ಅವನ ಕೈಗಳಲ್ಲಿ ಪ್ರಹರಿಸತೊಡಗಿತ್ತೋ... ಈವರೆಗಿನ ದಣಿವು, ಹಸಿವು, ನಿಶ್ಯಕ್ತಿ ಎಲ್ಲವೂ ಓಡಿಹೋದವು. ತನ್ನ ಬಾಹುಗಳ ಬಲದ ಬಗ್ಗೆ ತಾನೇ ಅಚ್ಚರಿ ಪಟ್ಟ. ಒಂದೊಂದು ಬಿರುಸಿನ ಕೊಡಲಿ ಹೊಡೆತ ವಜ್ರದ ಕಾಠಿಣ್ಯವನ್ನು ಮೀರಿಸುವಂತಿತ್ತು. ಅರ್ಧ ಗಂಟೆ ಒಂದೇ ಸಮನೆ ಉನ್ಮಾದಿತನಾಗಿ ವೀರಾವೇಶದಲ್ಲಿ ಸೆಣಸಾಟ ನಡೆಸಿದ. ಅವನ ಬಲ ಪ್ರಯೋಗಕ್ಕೆ ಕೊರಡು ಎರಡು ಹೋಳಾಗಿ ತೆರೆದುಕೊಂಡಿತು. ವೇಗದ ಕ್ರಿಯೆಯಲ್ಲಿ ಕೊಡಲಿಯೂ ಅವನ ಕೈಯಿಂದ ಜಾರಿ ದೂರ ಹೋಗಿ ಬಿತ್ತು. ತಲೆಸುತ್ತು ಬಂದು ದುಖಿ ಕೂಡಲೇ ನೆಲಕ್ಕುರುಳಿದ. ಅಂತು ಕೊನೆಗೆ ಹಸಿದ, ಬಾಯಾರಿದ, ನಿಶ್ಯಕ್ತ, ದಣಿದ ದೇಹವು ಫಲಿತಾಂಶ ನೀಡಿಯೇ ಬಿಟ್ಟಿತು.

''ಏಳು ಎದ್ದೇಳು... ಇನ್ನೊಂದು ನಾಲ್ಕು ಏಟು ಹಾಕು. ಸಣ್ಣ ಸಣ್ಣ ತುಂಡುಗಳಾಗಲಿ...'' ಎಂದು ಪಂಡಿತರು ಪುನಃ ಧ್ವನಿ ಎತ್ತರಿಸಿ ಪುಸಲಾಯಿಸಿದರು. ದುಖಿ ಮೇಲೇಳಲಿಲ್ಲ. ಇನ್ನೂ ಹೆಚ್ಚಿಗೆ ಒತ್ತಾಯಿಸುವುದರಲ್ಲಿ ಅರ್ಥವಿಲ್ಲ ಎಂದು ಕೊಂಡು ಪಂಡಿತರು ಮನೆಯೊಳಗೆ ಬಂದರು.

ಮೂಲಿಕೆ ಸೋಕಿ ಶೌಚ ಸ್ನಾನ ಮುಗಿಸಿದರು. ಬಟ್ಟೆ ಧರಿಸಿ ಹೊರಗೆ ಬಂದು ನೋಡಿದರು. ದುಖಿ ಇನ್ನೂ ಅಲ್ಲಿಯೇ ಬಿದ್ದಿದ್ದ.

''ಅರೇ!... ದುಖಿ, ಅಲ್ಲಿಯೇ ಎಷ್ಟೊತ್ತು ಬಿದ್ದು ಕೊಂಡಿರುತ್ತಿಯೋ?... ಏಳು... ನಿನ್ನ ಮನೆಗೆ ಹೋಗಬೇಕಲ್ಲಾ ನಡೆ... ಪೂಜೆ ಸಾಮಾನು ಎಲ್ಲಾ ಜೋಡಿಸಿಕೊಂಡಿದ್ದೀರಲ್ವಾ?...'' ಎಂದು ಅವನೆಡೆಗೆ ಕೂಗಿ ಮಾತಾಡಿಸಿದರು. ಆದರೂ ದುಖಿ ಮಿಸುಕಾಡಲಿಲ್ಲ. ಏನಾಯಿತು ಇವನಿಗೆ?... ಪಂಡಿತರಿಗೆ ಏನೋ ಅನುಮಾನ ಮೂಡಿತು. ಹತ್ತಿರ ಹೋಗಿ ನೋಡಿದರು. ಅವನು ಸೆಟೆದು ಹೋಗಿದ್ದ. ಭಯಭೀತರಾದರು. ಮನೆಯೊಳಗೆ ಓಡಿ ಬಂದರು.

''ದುಖಿಯಾ ಸತ್ತು ಹೋದ'' ಮಡದಿಗೆ ಹೇಳಿದರು. ಅವಳು ವಿಹ್ವಲಗೊಂಡು,